"ಮಧುರ ಮಕ್ಕಳೇ - ಬುದ್ಧಿವಂತರಾಗಿ ತಮ್ಮ ದಿನಚರ್ಯವನ್ನು (ಚಾರ್ಟ್) ನೋಡಿಕೊಳ್ಳಿ, ಯಾವುದೇ ಕರ್ಮೇಂದ್ರಿಯ ನನಗೆ ಮೋಸ ಮಾಡುತ್ತಿಲ್ಲವೇ, ಇಡೀ ದಿನದಲ್ಲಿ ಯಾವುದೇ ತಪ್ಪುಗಳು ಆದರೆ ತನಗೆ ತಾನೇ ಶಿಕ್ಷೆ ಕೊಟ್ಟುಕೊಳ್ಳಿ."

ಪ್ರಶ್ನೆ: ತಂದೆಯ ಜೊತೆ ಸತ್ಯ ವ್ಯಾಪಾರ ಮಾಡುವ ಹಾಗೂ ಶ್ರೇಷ್ಠ ಪದವಿ ಪಡೆದುಕೊಳ್ಳುವ ಆಧಾರವೇನು?

ಉತ್ತರ: ತಂದೆಯ ಜೊತೆ ಸತ್ಯ ವ್ಯಾಪಾರ ಮಾಡುವುದಾದರೆ ತಂದೆಯ ಪ್ರತಿಯೊಂದು ಶ್ರೀಮತದಂತೆ ನಡೆಯಬೇಕಾಗಿದೆ. ತಂದೆ ಹೇಳುತ್ತಾರೆ - ಮಕ್ಕಳೇ ನೀವು ಶ್ರೇಷ್ಠ ಪದವಿ ಪಡೆದುಕೊಳ್ಳಬೇಕೆಂದರೆ ತನ್ನಲ್ಲಿರುವ ಕೆಟ್ಟ ಅಭ್ಯಾಸಗಳನ್ನು ತೆಗೆದು ಬಿಡಿ. ಕುದೃಷ್ಟಿ (ವಿಕಾರ ದೃಷ್ಟಿ), ಕ್ರೋಧ ಮುಂತಾದವುಗಳಿಂದ ಬಹಳ ನಷ್ಟ ಆಗುತ್ತದೆ. ಆದ್ದರಿಂದ ಕರ್ಮ, ಅಕರ್ಮ, ವಿಕರ್ಮಗಳ ಗುಹ್ಯ ಗತಿಯನ್ನು ತಂದೆ ತಿಳಿಸಿದ್ದಾರೆ ಅದನ್ನು ಬುದ್ಧಿಯಲ್ಲಿಟ್ಟುಕೊಳ್ಳಿ.

ಓಂ ಶಾಂತಿ. ಮಕ್ಕಳೇ ಆತ್ಮ ಅಭಿಮಾನಿಗಳಾಗಿ ಕುಳಿತಿದ್ದೀರಾ? ಪ್ರತಿಯೊಂದು ಮಾತನ್ನೂ ತನ್ನ ಜೊತೆ ತಾನೇ ಕೇಳಿಕೊಳ್ಳಬೇಕಾಗುತ್ತದೆ. ತಂದೆ ಯುಕ್ತಿಯನ್ನು ತಿಳಿಸುತ್ತಾರೆ ತನ್ನನ್ನು ತಾನೇ ಕೇಳಿಕೊಳ್ಳಿ ನಾನು ಆತ್ಮಅಭಿಮಾನಿಯಾಗಿ ಕುಳಿತಿದ್ದೀನಾ? ತಂದೆಯ ನೆನಪು ಮಾಡುತ್ತಾ ಇದ್ದೇನಾ? ಇದು ನಿಮ್ಮ ಸೈನ್ಯ ಆಗಿದೆ. ಆ ಸೈನ್ಯದಲ್ಲಿ ಕೇವಲ ಯುವಕರು ಇರುತ್ತಾರೆ. ಈ ಸೈನ್ಯದಲ್ಲಿ ವೃದ್ಧರು, ಯುವಕರು, ಮಕ್ಕಳು ಎಲ್ಲರೂ ಇದ್ದೀರಿ. ಎಂಬತ್ತು-ತೊಂಬತ್ತು ವರ್ಷದ ವೃದ್ಧರೂ ಇದ್ದಾರೆ. ಈ ಸೈನ್ಯ ಆಗಿದೆ ಮಾಯೆಯ ಮೇಲೆ ವಿಜಯ ಪಡೆದುಕೊಳ್ಳುವಂತಹದ್ದು. ಪ್ರತಿಯೊಬ್ಬರೂ ಮಾಯೆಯ ಮೇಲೆ ವಿಜಯ ಪಡೆದುಕೊಂಡು ತಂದೆಯಿಂದ ಬೇಹದ್ದಿನ ಆಸ್ತಿ ಪಡೆದುಕೊಳ್ಳಬೇಕಾಗಿದೆ. ಮಾಯೆಯು ಬಹಳ ಪ್ರಭಲವಾಗಿದೆ. ಬಹಳ ಬಿರುಗಾಳಿಯನ್ನು ತರುತ್ತದೆ. ಪ್ರತಿಯೊಂದು ಕರ್ಮೇಂದ್ರಿಯವನ್ನು ಮೋಸ ಮಾಡುತ್ತದೆ. ಎಲ್ಲದಕ್ಕಿಂತ ಹೆಚ್ಚು ಮೋಸ ಮಾಡುವ ಕರ್ಮೇಂದ್ರಿಯ ಯಾವುದು? ಕಣ್ಣು ಎಲ್ಲದ್ದಕ್ಕಿಂತ ಹೆಚ್ಚು ಮೋಸ ಮಾಡುವಂತಹದ್ದು. ಮಕ್ಕಳಿಗೆ ತಿಳಿಸಲಾಗುತ್ತದೆ ಗೃಹಸ್ಥದಲ್ಲಿ ಸ್ತ್ರೀ ಪುರುಷ ಒಟ್ಟಿಗೆ ಇದ್ದರೂ ಬುದ್ಧಿಯಿಂದ ತಿಳಿದುಕೊಳ್ಳಿ ನಾವು ಬಿ.ಕೆ. ಆಗಿದ್ದೇವೆ, ಇಲ್ಲ ಎಂದರೆ ಕಣ್ಣು ಬಹಳ ಮೋಸ ಮಾಡುತ್ತದೆ. ಇದು ಚಾರ್ಟ್ ನಲ್ಲಿ ಬರೆಯಬೇಕಾಗಿದೆ. ನನಗೆ ಇಂದು ಇಡೀ ದಿನ ನನ್ನ ಯಾವ ಕರ್ಮೇಂದ್ರಿಯ ಮೋಸ ಮಾಡಿದೆ. ನಂಬರ್ ವಾರ್ ಮೋಸ ಮಾಡುವಂತಹದ್ದು ಕಣ್ಣು. ಕಣ್ಣು ಬಹಳ ನಷ್ಟ ಮಾಡಿಸುತ್ತದೆ. ಹಾಗೂ ಪದವಿ ಭ್ರಷ್ಟರನ್ನಾಗಿ ಮಾಡುತ್ತದೆ. ಬುದ್ಧಿವಂತ ಮಕ್ಕಳು ಇಡೀ ದಿನದ ಚಾರ್ಟ್ ನ್ನು ನೋಟ್ ಮಾಡಿಕೊಳ್ಳುತ್ತಾರೆ. ನಾನು ಯಾವುದೇ ತಪ್ಪು ಮಾಡಲಿಲ್ಲವೇ. ಭಕ್ತಿ ಮಾರ್ಗದಲ್ಲಿಯೂ ಕೆಲವರು ತನ್ನಿಂದ ಯಾವುದಾದರೂ ತಪ್ಪುಗಳು ಆದರೆ ತನಗೆ ತಾನೆ ಶಿಕ್ಷೆ ಕೊಟ್ಟುಕೊಳ್ಳುತ್ತಿದ್ದರು. ಮತ್ತೆ (ಪುನಃ) ಅಂತಹ ಕರ್ಮ ಆಗದಂತೆ ನೋಡಿಕೊಳ್ಳುತ್ತಾರೆ, ಹಾಗೆ ಇಲ್ಲಿಯು ಚೆಕ್ ಮಾಡಿಕೊಳ್ಳಿ, ಕಣ್ಣು ಮೋಸ ಮಾಡಿದರೆ ತನಗೆ ತಾನೆ ಶಿಕ್ಷಿಸಿಕೊಳ್ಳಿ, ಅಲ್ಲಿಂದ ದೂರ ಹೋಗಿ ಬಿಡಬೇಕು. ನೋಡುತ್ತಾ ನಿಲ್ಲಬಾರದಾಗಿದೆ. ಸನ್ಯಾಸಿಗಳು ಬಹಳಷ್ಟು ಜನ ಕಣ್ಣು ಮುಚ್ಚಿಕೊಳ್ಳುತ್ತಾರೆ. ಸ್ತ್ರೀಯರನ್ನು ನೋಡುವುದೇ ಇಲ್ಲ. ಅಲ್ಲಿಯ ಸತ್ಸಂಗಗಳಲ್ಲಿ ಪುರುಷರನ್ನು ಮುಂದೆ, ಸ್ತ್ರೀಯರನ್ನು ಹಿಂದೆ ಕೂರಿಸುತ್ತಾರೆ. ಇಲ್ಲಿ ನೀವು ಮಕ್ಕಳು ಪರಿಶ್ರಮ ಪಡಬೇಕಾಗಿದೆ. ವಿಶ್ವ ರಾಜ್ಯ ಪಡೆಯುವುದು ಚಿಕ್ಕಮ್ಮನ ಮನೆಯಲ್ಲಿ ಊಟಾ ಮಾಡಿದಷ್ಟು ಸಹಜವಲ್ಲ.

ಈಗ ನೀವು ಮಕ್ಕಳು ಸಂಗಮಯುಗದಲ್ಲಿದ್ದೀರಿ, ತಂದೆ ಹೇಳುತ್ತಾರೆ ಸಂಗಮದ ಜೊತೆ-ಜೊತೆಗೆ ಪುರುಷೋತ್ತಮ ಅಕ್ಷರ ಅವಶ್ಯಕವಾಗಿ ಬರೆಯಿರಿ. ಆಗ ಯಾರಿಗಾದರೂ ತಿಳಿಸಿಕೊಡುವುದು ಸಹಜವಾಗುತ್ತದೆ. ಪುರುಷೋತ್ತಮ ಸಂಗಮಯುಗದಲ್ಲಿ ನೀವು ಮನುಷ್ಯರಿಂದ ದೇವತೆಗಳು ಆಗುತ್ತೀರೆಂದು ಗಾಯನವಿದೆಯಲ್ಲವೇ! ಮನುಷ್ಯರಿಂದ ದೇವತೆಗಳನ್ನಾಗಿ ಮಾಡಿದರು....... ಯಾವ ಮನುಷ್ಯರನ್ನು? ಕಲಿಯುಗಿ ಮನುಷ್ಯರನ್ನು. ದೇವತೆಗಳು ಇರುವುದು ಸತ್ಯಯುಗದಲ್ಲಿ, ಕಲಿಯುಗಿ ಮನುಷ್ಯರಿಂದ ದೇವತೆ, ನರಕವಾಸಿಗಳಿಂದ ಸ್ವರ್ಗವಾಸಿಗಳನ್ನಾಗಿ ಮಾಡಲು ತಂದೆ ಬಂದಿದ್ದಾರೆ. ಇದನ್ನು ಈಗ ನೀವು ತಿಳಿದುಕೊಂಡಿದ್ದೀರಿ. ಮನುಷ್ಯರು ಘೋರ ಅಂಧಕಾರದಲ್ಲಿದ್ದಾರೆ. ಬಹಳ ಜನರಿದ್ದಾರೆ ಯಾರು ಸ್ವರ್ಗವನ್ನು ನೋಡುವುದೇಇಲ್ಲ. ತಂದೆ ಹೇಳುತ್ತಾರೆ - ಮಕ್ಕಳೇ ನಿಮ್ಮ ಈ ಧರ್ಮ ಬಹಳ ಸುಖ ನೀಡುವಂತದ್ದು ಆಗಿದೆ. ಹಾಡುತ್ತಾರೆ ಹೆವನ್ಲೀ ಗಾಡ್ ಫಾದರ್ ಎಂದು ಆದರೆ ಅವರು ಸ್ವರ್ಗದ ರಚೈತ ಆಗಿದ್ದಾರೆ, ಇದನ್ನು ಯಾರು ತಿಳಿದುಕೊಂಡಿಲ್ಲ ಅನ್ಯ ಧರ್ಮದವರು ಹೇಳುತ್ತಾರೆ ಹೆವನ್ಲೀ ಗಾಡ್ ಫಾದರ್ ಎಂದು ಆದರೆ ಅವರಿಗೆ ಗೊತ್ತಿಲ್ಲ. ಆ ಸ್ವರ್ಗದಲ್ಲಿ ನಮ್ಮ ಪಾತ್ರವಿಲ್ಲ ಎಂಬುವುದು. ಕ್ರಿಶ್ಚಿಯನ್ನರು ಸ್ವಯಂ ಹೇಳುತ್ತಾರೆ ಇಲ್ಲಿ ಸ್ವರ್ಗ ಇತ್ತು ಎಂದು. ಆ ದೇವೀ-ದೇವತೆಗಳನ್ನು ಗಾಡ್-ಗಾಡೆಸ್ಸ್ ಎಂದು ಹೇಳಲಾಗುತ್ತದೆ. ಆದರೆ ಯಾರಿಗೂ ಗೊತ್ತಿಲ್ಲ – ಅವಶ್ಯಕ ಗಾಡ್ (ಪರಮಾತ್ಮ) ನೆ ಗಾಡ್-ಗಾಡೆಸ್ಸ್ ಳನ್ನಾಗಿ ಮಾಡಿದ್ದು ಎಂಬುದು. ಈಗ ತಂದೆ ನಿಮ್ಮನ್ನು ದೇವತೆಗಳನ್ನಾಗಿ ಮಾಡುತ್ತಿದ್ದಾರೆ. ಆದರೆ ನೀವು ಪರಿಶ್ರಮ ಪಡಬೇಕಾಗಿದೆ. ತನ್ನನ್ನು ಪ್ರತಿ ದಿನ ಕೇಳಿಕೊಳ್ಳಿ ನನಗೆ ಯಾವುದೇ ಕರ್ಮೇಂದ್ರಿಯ ಮೋಸ ಮಾಡುವುದಿಲ್ಲವೇ? ನಾಲಿಗೆಯು ಏನೂ ಕಡಿಮೆ ಇಲ್ಲ, ಒಳ್ಳೆ ತಿಂಡಿ ನೋಡಿದರೆ ತಿನ್ನಬೇಕು ಅನಿಸುತ್ತದೆ. ಮೊದಲು (ಆದಿಯಲ್ಲಿ)

ರಾತ್ರಿ ಕಛೇರಿ ನಡೆಯುತ್ತಿತ್ತು. ತಪ್ಪು ಮಾಡಿದರೆ ಸತ್ಯವಾಗಿ ಹೇಳುತ್ತಿದ್ದರು. ಶಿವಬಾಬಾರವರ ಯಜ್ಞದಲ್ಲಿ ಯಾವುದಾದರು ವಸ್ತುವಿನ ಕಳ್ಳತನ ಮಾಡುವುದು ಬಹಳ ಕೆಟ್ಟದ್ದು ಆಗಿದೆ. ಆದರೆ ಮಾಯೆ ಅನೇಕರಿಗೆ ಮೂಗು ಇಡಿದು ಸರಿಯಾಗಿ ಪೆಟ್ಟು ಕೊಡುತ್ತದೆ. ತಂದೆ ಹೇಳುತ್ತಾರೆ - ಮಕ್ಕಳೇ ಯಾವುದಾದರೂ ಕೆಟ್ಟ ಅಭ್ಯಾಸ ಇದ್ದರೆ ತೆಗೆದು ಬಿಡಬೇಕು. ಇಲ್ಲವೆಂದರೆ ಶ್ರೇಷ್ಠ ಪದವಿ ಪಡೆದುಕೊಳ್ಳಲು ಸಾಧ್ಯವಿಲ್ಲ. ಸ್ವರ್ಗಕ್ಕೆ ಹೋಗಬಹುದು ಆದರೆ ರಾಜ ಪದವಿ ಎಲ್ಲಿ, ಪ್ರಜೆ ಪದವಿ ಎಲ್ಲಿ...... ಪ್ರಜೆಗಳಲ್ಲಿಯು ಬಡ ಪ್ರಜೆಗಳು, ಶ್ರೀಮಂತ ಪ್ರಜೆಗಳಿದ್ದಾರೆ. ಕರ್ಮೇಂದ್ರಿಯಗಳನ್ನು ಬಹಳ ಸಂಭಾಲನೆ ಮಾಡಬೇಕಾಗಿದೆ. ಚಾರ್ಟ್ ಬರೆಯಬೇಕು, ಏಕೆಂದರೆ ಇದು ವ್ಯಾಪಾರ ಆಗಿದೆ. ಇಂತಹ ವ್ಯಾಪಾರ ಮಾಡುವವರು ಬಹಳ ಕಡಿಮೆ ಎಂದು ತಂದೆ ಹೇಳುತ್ತಾರೆ. ಮಕ್ಕಳೇ ನನ್ನಿಂದ ವ್ಯಾಪಾರ ಮಾಡಬೇಕೆಂದರೆ, ಶ್ರೇಷ್ಠ ಪದವಿ ಪಡೆಯಬೇಕಾದರೆ ನನ್ನ ಶ್ರೀಮತದಂತೆ ನಡೆಯಬೇಕಾಗಿದೆ, ಮಾಯೆ ನಿಮಗೆ ಮರೆಸುತ್ತದೆ. ಅಕಸ್ಮಾತ್ ತಂದೆಯ ಶ್ರೀಮತದಂತೆ ನಡೆಯಿದಿದ್ದಲ್ಲಿ ಅಂತ್ಯದಲ್ಲಿ ಸಾಕ್ಷಾತ್ಕಾರ ಆಗುತ್ತದೆ. ನಂತರ ಬಹಳ ಪಶ್ಚಾತ್ತಾಪ ಪಡಬೇಕಾಗುತ್ತದೆ. ಈಗ ಎಲ್ಲರು ಹೇಳುತ್ತೀರಿ - ನಾವೇ ನರನಿಂದ ನಾರಾಯಣ ಆಗುತ್ತೇವೆ ಎಂದು, ಆದರೆ ತನ್ನ ಜೊತೆ ತಾನೆ ಕೇಳಿಕೊಳ್ಳಿ - ತಂದೆಯ ಶ್ರೀಮತದಂತೆ ನಡೆದರೆ ಬಹಳ ಉನ್ನತಿಯನ್ನು ಪಡೆಯುತ್ತೇವೆ. ಇಡೀ ದಿನದ ಚಾರ್ಟ್ (ಲೆಕ್ಕಾಚಾರ) ಬರೆಯಿರಿ. ಕಣ್ಣು ಮೋಸ ಮಾಡಲಿಲ್ಲವೆ. ಗುರಿ ಬಹಳ ಶ್ರೇಷ್ಠವಾಗಿದೆ ಆದ್ದರಿಂದ ಎಂಟು ರತ್ನಗಳೇ ಗೌರವಾನ್ವಿತ ತೇರ್ಗಡೆ ಆಗುತ್ತಾರೆ. ನವ ರತ್ನಗಳು ಇವೆ. ಅದರಲ್ಲಿ ನಂಬರ್ ವನ್ ಬಾಬಾ. ಉಳಿದ ಎಂಟು ರತ್ನಗಳಲ್ಲಿ ಯಾವುದಾದರೂ ಗ್ರಹಚಾರ ಬಂದರೆ ಎಂಟು ರತ್ನಗಳ ಉಂಗುರ ಹಾಕಿಕೊಳ್ಳುತ್ತಾರೆ. ಎಂಟು ರತ್ನಗಳೇ ಗೌರವಾನ್ವಿತ ತೇರ್ಗಡೆ ಹೊಂದುವವರು. ಉಳಿದ ಎಲ್ಲಾ ರತ್ನಗಳಲ್ಲಿಯು ಅಲ್ಪ-ಸ್ವಲ್ಪವಾದರೂ ಕಲೆ ಇರುತ್ತದೆ. ಇದರಲ್ಲಿ ಬಹಳ ಪರಿಶ್ರಮಯಿದೆ. ಏಕೆಂದರೆ ರಾವಣ ರಾಜ್ಯ ಅಲ್ಲವೇ. ಸತ್ಯಯುಗದಲ್ಲಿ ಇಂತಹ ಯಾವುದೇ ಮಾತುಗಳು ಇರುವುದಿಲ್ಲ ಏಕೆಂದರೆ ರಾವಣ ರಾಜ್ಯವೇ ಇರುವುದಿಲ್ಲ. ಶ್ರೇಷ್ಠ ಪದವಿಗಾಗಿಯೇ ತಂದೆ ನಿಮಗೆ ಓದಿಸುತ್ತಿದ್ದಾರೆ. ನೀವೇ ವಿಚಾರ ಮಾಡಿ ಅನೇಕ ಗುರುಗಳನ್ನು ಮಾಡಿಕೊಳ್ಳುತ್ತಾರೆ. ಇವರಂತೂ ಸದ್ಗುರು ಆಗಿದ್ದಾರೆ. ಅವರಂತೂ ಸರ್ವವ್ಯಾಪಿ ಎಂದು ಹೇಳಿ ತಂದೆಯನ್ನು ವಿಮುಖರನ್ನಾಗಿ ಮಾಡಿದ್ದಾರೆ. ನೀವು ತಿಳಿಸಬಹುದು ತಂದೆ ಹೇಳುತ್ತಾರೆ - ಕೇವಲ ನನ್ನ ಒಬ್ಬನನ್ನೇ ನೆನಪು ಮಾಡಿ. ನಾನು ಪತಿತ ಪಾವನನಾಗಿದ್ದೇನೆ. ನೀವು ಹೇಳುತ್ತೀರಿ ಕಲ್ಲು-ಮುಳ್ಳಿನಲ್ಲಿದ್ದಾರೆ ಎಂದು. ಈಗ ತಂದೆ ಹೇಳುತ್ತಾರೆ ನೀವೆಲ್ಲರು ಅಸುರೀ ಮತದಂತೆ ನಡೆದು ನನಗೆ ಅಪಕಾರವನ್ನೇ ಮಾಡುತ್ತಾ ಬಂದಿದ್ದೀರಿ. ಈಗ ನಾವು ಎಲ್ಲರ ಮೇಲೆ ಉಪಕಾರವನ್ನು ಮಾಡಬೇಕಾಗಿದೆ. ನೀವು ಮಕ್ಕಳಲ್ಲಿ ವಿಕಾರದೃಷ್ಟಿ, ಕ್ರೋಧ ಮುಂತಾದವುಗಳು ಏನೂ ಇರಬಾರದು. ಇದ್ದರೆ ತನಗೆ ತಾನೆ ನಷ್ಟ ಮಾಡಿಕೊಳ್ಳುತ್ತೀರಿ. ಯಾರಲ್ಲಿ ವಿಕಾರ ದೃಷ್ಟಿ ಇರುತ್ತದೆ ಅವರಿಂದ ವೈಬ್ರೇಷನ್ (ಪ್ರಕಂಪನೆ) ಬರುತ್ತದೆ. ಬೇರೆಯವರಿಗೂ ಆಕರ್ಷಣೆ ಆಗುತ್ತದೆ. ತಂದೆ ಮಕ್ಕಳಿಗೆ ಪದೆ-ಪದೆ ಗಮನ ಸೆಳೆಯುತ್ತಾರೆ - ಮಕ್ಕಳೇ ತನ್ನನ್ನು ನೋಡಿಕೊಳ್ಳಿ ಯಾವುದೇ ಕರ್ಮೇಂದ್ರಿಯಕ್ಕೆ ವಶವಾಗಿ ವಿಕರ್ಮ ಮಾಡಲಿಲ್ಲವೇ. ಇದು ವಿಕರ್ಮಗಳ ಸವಂತ್ಸರವಾಗಿದೆ. ಮೊದಲು ವಿಕರ್ಮಾಜೀತ ಸಂವತ್ಸರ ಇತ್ತು. ಯಾವಾಗಿನಿಂದ ವಿಕರ್ಮ ಮೊದಲು ಪ್ರಾರಂಭಿಸುತ್ತೀರಿ ಆಗ ವಿಕರ್ಮಗಳ ರಾಜ್ಯ ಆಗುತ್ತದೆ. ಈಗ ತಂದೆ ಮಕ್ಕಳಿಗೆ ಕರ್ಮ, ಅಕರ್ಮ, ವಿಕರ್ಮಗಳ ರಹಸ್ಯವನ್ನು ತಿಳಿಸಿತ್ತಿದ್ದಾರೆ. ಕರ್ಮವನ್ನು ಮಾಡಲೇಬೇಕು. ಸ್ವರ್ಗದಲ್ಲಿ ನಿಮ್ಮ ಕರ್ಮ ಅಕರ್ಮ ಆಗಿರುತ್ತದೆ. ಈ ಎಲ್ಲಾ ಮಾತುಗಳು ಈಗ ನಿಮಗೆ ಗೊತ್ತಿದೆ. ಅನ್ಯರು ಎಲ್ಲರು ಅಜ್ಞಾನದ ಅಂಧಕಾರದಲ್ಲಿದ್ದಾರೆ. ಈಗ ನಿಮಗೆ ಮೂರನೆಯ ನೇತ್ರ ಸಿಕ್ಕಿದೆ. ತ್ರಿನೇತ್ರಿ ತ್ರಿಕಾಲದರ್ಶಿಯನ್ನಾಗಿ ಮಾಡುವಂತಹವರು ಒಬ್ಬರೆ ತಂದೆ ಆಗಿದ್ದಾರೆ. ಈ ನಾಟಕದ ರಹಸ್ಯವನ್ನು ಯಾರು ತಿಳಿದುಕೊಂಡಿಲ್ಲ. ನೀವು ಮೂಲವತನ, ಸೂಕ್ಷ್ಮವತನ, ಸ್ಥೂಲವತನ ಎಲ್ಲವನ್ನು ತಿಳಿದುಕೊಂಡಿದ್ದೀರಿ. ಅರ್ಧಕಲ್ಪದ ನಂತರ ಅನ್ಯ ಧರ್ಮಗಳು ಬರುತ್ತವೆ ಹಾಗೂ ವೃದ್ಧಿ ಆಗುತ್ತವೆ. ಅವರನ್ನು ಗುರು ಎಂದು ಹೇಳಲು ಸಾಧ್ಯವಿಲ್ಲ. ಗುರು ಒಬ್ಬರೇ. ಅವರ ಹೊರತಾಗಿ ಯಾರೂ ಸದ್ಗತಿ ನೀಡಲು ಸಾಧ್ಯವಿಲ್ಲ. ಈಗ ಎಲ್ಲರ ಸದ್ಗತಿ ಆಗುತ್ತಿದೆ. ಅವರನ್ನು ಧರ್ಮ ಸ್ಥಾಪಕರೆಂದು ಹೇಳಲಾಗುತ್ತದೆ. ಗುರು ಎಂದು ಅಲ್ಲ. ಅವರನ್ನು ನೆನಪು ಮಾಡುವುದರಿಂದ ಸದ್ಗತಿಯು ದೊರೆಯುವುದಿಲ್ಲ. ವಿಕರ್ಮ ವಿನಾಶ ಆಗುವುದಿಲ್ಲ. ಅದನ್ನು ಭಕ್ತಿ ಎಂದು ಹೇಳಲಾಗುತ್ತದೆ. ಜ್ಞಾನ ಮಾರ್ಗದಲ್ಲಿ ಕೇವಲ ನೀವಷ್ಟೆ ಇದ್ದೀರಿ. ಇದಾಗಿದೆ ಪಾಂಡವ ಸೈನ್ಯ. ನೀವೆಲ್ಲರೂ ಶಾಂತಿಧಾಮ ಹಾಗೂ ಸುಖಧಾಮದ ಮಾರ್ಗದರ್ಶಕರಾಗಿದ್ದೀರಿ. ನಿಮ್ಮ ಬುದ್ಧಿಯಲ್ಲಿಯೂ ಇದೆ - ನಾವು ಮಾರ್ಗದರ್ಶಕರೆಂದು. ತಂದೆ ಮುಕ್ತಿದಾತ ಹಾಗೂ ಮಾರ್ಗದರ್ಶಕರು ಆಗಿದ್ದಾರೆ. ಪ್ರತಿಯೊಬ್ಬರಿಗೂ ಮುಕ್ತಿ ಕೊಡುತ್ತಾರೆ. ತಂದೆ ಹೇಳುತ್ತಾರೆ - ನನ್ನನ್ನು ನೆನಪು ಮಾಡಿ. ನಿಮ್ಮ ವಿಕರ್ಮ ವಿನಾಶವಾಗುತ್ತದೆ. ಪುನಃ ಏನಾದರೂ ವಿಕರ್ಮ ಮಾಡಿದರೆ ಒಂದಕ್ಕೆ ನೂರುಪಟ್ಟು ಶಿಕ್ಷೆ ಸಿಗುತ್ತದೆ. ಆದ್ದರಿಂದ ವಿಕರ್ಮ ಮಾಡಬೇಡಿ. ತಂದೆ ಹೆಸರಿಗೆ ಕಳಂಕ ತರಬೇಡಿ. ವಿಕರ್ಮ ಮಾಡುವುದರಿಂದ ವೃದ್ಧಿ ಆಗುತ್ತದೆ. ಆದ್ದರಿಂದ ಈಗ ಬಹಳ ಎಚ್ಚರಿಕೆಯಿಂದ ಇರಬೇಕು. ಸಹೋದರ-ಸಹೋದರಿ ದೃಷ್ಟಿ ಪಕ್ಕಾ ಮಾಡಿಕೊಳ್ಳಿ. ನಾವು ಬ್ರಹ್ಮಾರವರ ಮಕ್ಕಳು, ಶಿವಬಾಬಾರವರ ಮೊಮ್ಮಕ್ಕಳು. ಶಿವಬಾಬಾರವರ ಜೊತೆ ಪ್ರತಿಜ್ಞೆ ಮಾಡಿದ್ದೇವೆ. ಆದರೆ ಮಾಯೆ ಬಹಳ ಮೋಸ ಮಾಡುತ್ತದೆ. ಲಕ್ಷ್ಮೀ-ನಾರಾಯಣ ಆಗುತ್ತೇವೆಂದು ಹೇಳುವುದು ಬಹಳ ಸಹಜ. ಆದರೆ ಶ್ರೀಮತದಂತೆ ನಡೆಯಬೇಕಲ್ಲವೇ! ಸ್ತ್ರೀ ಪುರುಷರು ಇಬ್ಬರೂ ಇಡೀ ದಿನ ಪರಸ್ಪರ ಜ್ಞಾನದ ಮಾತುಗಳನ್ನೇ ಮಾತನಾಡಿ. ಇಬ್ಬರೂ ಹೇಳುತ್ತೀರಿ ನಾವು ಬಾಬಾರವರಿಂದ ಪೂರ್ಣ ಆಸ್ತಿಯನ್ನು ಪಡೆಯುತ್ತೇವೆ. ಟೀಚರ್ ನಿಂದ ವಿದ್ಯೆಯನ್ನು ಓದಿ. ಇಂತಹ ಟೀಚರ್ ಮತ್ತೆ ಯಾವಾಗ ಸಿಗುತ್ತಾರೆ ಇದನ್ನು ಕೇವಲ ನೀವಷ್ಟೆ ತಿಳಿದುಕೊಂಡಿದ್ದೀರಿ. ದೇವತೆಗಳೇ ತಂದೆಯನ್ನು ತಿಳಿದುಕೊಳ್ಳದಿರುವಾಗ ಅನ್ಯ ಧರ್ಮದವರು ತಿಳಿದುಕೊಳ್ಳಲು ಹೇಗೆ ಸಾಧ್ಯ. ಈಗ ತಂದೆ ಇಡೀ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಜ್ಞಾನವನ್ನು ತಿಳಿಸುತ್ತಿದ್ದಾರೆ. ಈ ಜ್ಞಾನವು ನಂತರ ಪ್ರಾಯಃಲೋಪ ಆಗಿ ಬಿಡುತ್ತದೆ. ನಾನು ಪ್ರಾಯಃಲೋಪ ಆಗಿ ಬಿಡುತ್ತೇನೆ ಎಂದ ಮೇಲೆ ಮತ್ತೆ ಪುನಃ ಈ ಜ್ಞಾನ

ಹೇಗೆ ಸಿಗಲು ಸಾಧ್ಯ. ತಂದೆ ಮಕ್ಕಳಿಗೆ ಯುಕ್ತಿ ಹೇಳುತ್ತಾರೆ-ಸದಾ ನೆನಪಿನಲ್ಲಿ ಇಟ್ಟುಕೊಳ್ಳಿ ಶಿವಬಾಬಾರವರೇ ನಮಗೆ ತಿಳಿಸಿಕೊಡುತ್ತಿದ್ದಾರೆ. ಬ್ರಹ್ಮಾರವರಿಗೂ ಗೊತ್ತಿದೆ ನಾನು ಶಿವಬಾಬಾರವರಿಂದ ಆಸ್ತಿ ಪಡೆಯುತ್ತಿದ್ದೇನೆ. ಇವರು (ಬ್ರಹ್ಮಾ) ವಿದ್ಯಾರ್ಥಿ ಜೀವನದಲ್ಲಿದ್ದಾರೆ. ನೀವು ಮನುಷ್ಯರಿಂದ ದೇವತೆಗಳು ಆಗಲು ಓದುತ್ತಿದ್ದೀರಿ. ದೇವತೆಗಳು ಸತ್ಯಯುಗದಲ್ಲಿ ಇರುತ್ತಾರೆ. ಕಲಿಯುಗದಲ್ಲಿ ಮನುಷ್ಯರು ಇದ್ದಾರೆ. ಇಲ್ಲಿ ಅನೇಕ ಧರ್ಮಗಳು ಇವೆ. ಇದು ಬಹಳ ತಿಳಿದುಕೊಳ್ಳುವ ವಿಷಯವಾಗಿದೆ. ಇಲ್ಲಿ ಅನೇಕರು ಬರುತ್ತಾರೆ. ಆದರೆ ಅದೃಷ್ಟದಲ್ಲಿ ಇಲ್ಲವೆಂದರೆ ಸಂಶಯ ಬರುತ್ತದೆ. ಇವರಲ್ಲಿ ಶಿವಬಾಬಾ ಹೇಗೆ ಬಂದು ಓದಿಸುತ್ತಾರೆಂದು ನಮಗೆ ಗೊತ್ತಿಲ್ಲ. ಶಿವಬಾಬಾರವರು ಬಂದಿಲ್ಲ ಎಂದರೆ ನೆನಪು ಹೇಗೆ ಮಾಡುತ್ತೀರಿ? ಹೇಗೆ ವಿಕರ್ಮ ವಿನಾಶವಾಗುತ್ತದೆ? ಶಿವಬಾಬಾರ ನೆನಪು ಮಾಡದಿದ್ದರೆ ವಿಕರ್ಮ ಹೇಗೆ ವಿನಾಶ ಆಗಲು ಸಾಧ್ಯ. ಇಲ್ಲವೆಂದರೆ ಬಹಳ ಶಿಕ್ಷೆ ಪಡೆಯಬೇಕಾಗುತ್ತದೆ. ನಂತರ ನಯಾ ಪೈಸೆಯ ಪದವಿ ಪಡೆಯಬೇಕಾಗುತ್ತದೆ. ಈಗ ರಾಜಧಾನಿ ತಯಾರಾಗುತ್ತಿದೆ. ರಾಜಧಾನಿಯಲ್ಲಿ ರಾಜರುಗಳಿಗೆ ದಾಸ-ದಾಸಿಯರು ಇರುತ್ತಾರೆ. ಬ್ರಹ್ಮಾ ತಂದೆ ಹೇಳುತ್ತಾರೆ-ಮಕ್ಕಳೇ ಬಾಬಾರನ್ನು ಕೇಳಿ ನಾನು ಈಗ ಶರೀರ ಬಿಟ್ಟರೆ ಏನು ಪದವಿ ಪಡೆಯುತ್ತೇನೆಂದು? ಬಾಬಾ ಎಲ್ಲವನ್ನು ತಿಳಿಸಿಕೊಡುತ್ತಾರೆ. ನಂಬರ್ ವಾರ್ ಇದ್ದೀರಿ. ಈ ವಿದ್ಯೆ ಬಹಳ ಶ್ರೇಷ್ಠವಾಗಿದೆ. ಇದರಲ್ಲಿ ಬಹಳ ಸಂಪಾದನೆ ಇದೆ. ಮನುಷ್ಯರು ಸಂಪಾದನೆಗಾಗಿ ಎಷ್ಟು ಕಷ್ಟ ಪಡುತ್ತಾರೆ. ಹಗಲು ರಾತ್ರಿ ಅದೇ ಚಿಂತೆಯಲ್ಲಿ ಇರುತ್ತಾರೆ. ನಿಮ್ಮ ಹತ್ತಿರ ಎಷ್ಟು ವ್ಯಾಪಾರಿಗಳು ಬರುತ್ತಾರೆ. ಏನು ಮಾಡಲಿ ಸಮಯವಿಲ್ಲ ಎನ್ನುತ್ತಾರೆ. ಕೇವಲ ಶಿವಬಾಬಾರವರ ನೆನಪಿನಿಂದ ರಾಜ್ಯಭಾಗ್ಯ ಪ್ರಾಪ್ತಿಯಾಗುತ್ತದೆ. ತನ್ನ ಇಷ್ಟ ದೇವತೆಯನ್ನ ನೆನಪು ಮಾಡುತ್ತೀರಿ. ಯಾವುದೇ ದೇವತೆಗಳನ್ನು ನೆನಪು ಮಾಡುವುದರಿಂದ ವಿಕರ್ಮ ವಿನಾಶ ಆಗುವುದಿಲ್ಲ. ಆದ್ದರಿಂದ ಪದೆ ಪದೆ ಹೇಳುತ್ತಾರೆ. ಏಕೆಂದರೆ ಯಾರೂ ನಮಗೆ ಇದನ್ನು ಹೇಳಿಲ್ಲ ಎಂದು ಹೇಳಬಾರದು. ನೀವು ಮಕ್ಕಳು ಎಲ್ಲರಿಗೂ ಸಂದೇಶ ನೀಡಬೇಕಾಗಿದೆ. ವಿಮಾನದಿಂದ ಕರಪತ್ರಗಳನ್ನು ಹಾಕುವುದು ಒಳ್ಳೆಯ ಸೇವೆಯಾಗಿದೆ. ಯಾರು ಈ ರೀತಿ ಹೇಳಬಾರದಾಗಿದೆ ನಮಗೆ ಗೊತ್ತಾಗಲೇ ಇಲ್ಲ ತಂದೆ ಬಂದಿದ್ದಾರೆಂದು. ಆದ್ದರಿಂದ ಇದೆಲ್ಲಾ ರೀತಿ ಸೇವೆ ಮಾಡಬೇಕಾಗಿದೆ.

ಬ್ರಹ್ಮಾ ಶಿವಬಾಬಾರವರ ಮೊಟ್ಟ ಮೊದಲ ಮಗು . ಪ್ರಜಾಪಿತ ಬ್ರಹ್ಮಾರವರು ಸಹ ತಂದೆ ಆಗಿದ್ದಾರಲ್ಲವೇ! ಬ್ರಹ್ಮಾರವರ ಮೂಲಕ ಶಿವಬಾಬಾ ಸ್ವರ್ಗದ ಸ್ಥಾಪನೆ ಮಾಡುತ್ತಿದ್ದಾರೆ. ತಂದೆ ಹೇಳುತ್ತಾರೆ ನಾನು ಇವರ ಮೂಲಕ ಆದಿ ಸನಾತನ ದೇವೀ-ದೇವತಾ ಧರ್ಮದ ಸ್ಥಾಪನೆ ಮಾಡುತ್ತಿದ್ದೇನೆ. ವಿನಾಶದ ನಂತರ ವಿಶ್ವದಲ್ಲಿ ಸುಖ, ಶಾಂತಿ, ಪವಿತ್ರತೆ ಇರುತ್ತದೆ. ಕಲ್ಪ-ಕಲ್ಪದಲ್ಲಿ ಈ ರೀತಿ ಸ್ವರ್ಗದ ಸ್ಥಾಪನೆ ಆಗುತ್ತದೆ. ಸದಾ ಬಾಬಾ, ಬಾಬಾ ಎಂದು ಹೇಳುತ್ತಾ ಇರಿ. ಬಾಬಾ ಎಂದು ಹೇಳುವುದರಿಂದ ಕಣ್ಣಿನಿಂದ ಆನಂದ (ಪ್ರೇಮದ) ದ ಬಾಷ್ಪ ಬರಬೇಕು. ಬಾಬಾ ನಿಮ್ಮ ಜೊತೆ ಯಾವಾಗ ಮಿಲನ ಮಾಡುತ್ತೇವೊ ಎಂದು ಬಂಧನದಲ್ಲಿ ಇರುವವರು ಹೇಳುತ್ತಾರೆ. ಆದರೆ ಯಾರು ಸಮ್ಮುಖದಲ್ಲಿದ್ದಾರೊ, ಅವರಿಗೆ ನಿಶ್ಚಯ ಇರುವುದಿಲ್ಲ, ಯಾರು ಮಿಲನ ಮಾಡಿಲ್ಲವೊ ಅವರು ಮಿಲನ ಮಾಡುವುದಕ್ಕೆ ಹಾ ತೊರೆಯುತ್ತಾರೆ. ಎಷ್ಟು ಅದ್ಭುತ! ಬರೆಯುತ್ತಾರೆ ಬಂಧನದಿಂದ ಮುಕ್ತರನ್ನಾಗಿ ಮಾಡಿ. ಕೆಲವರಂತು ಬಾಬಾರವರ ಮಕ್ಕಳಾಗಿ ಮಾಯೆಗೆ ವಶವಾಗಿ ಬಿಡುತ್ತಾರೆ. ಅಂತ್ಯದಲ್ಲಿ ನೆನಪು ಬರುತ್ತದೆ. ಶರೀರ ಬಿಡುವಾಗ ಎಲ್ಲರಿಗೂ ಹೇಳುತ್ತಾರೆ-ರಾಮ, ರಾಮ ಹೇಳಿ ಎಂದು. ಬಾಬಾರವರ ನೆನಪಿನಿಂದಲೇ ವಿಕರ್ಮ ವಿನಾಶವಾಗುತ್ತದೆ. ತಂದೆ ಹೇಳುತ್ತಾರೆ- ಮಧುರ, ಮಧುರ ಮಕ್ಕಳೇ ತಮ್ಮ ಕಲ್ಯಾಣ ಮಾಡಿಕೊಳ್ಳಿ. ತಂದೆ ಶ್ರೀಮತದಂತೆ ನಡೆಯಿರಿ. ಎಲ್ಲರಿಗೂ ಸಂದೇಶವನ್ನು ನೀಡುತ್ತಾ ಹೋಗಿ. ವಿಮಾನದಿಂದ ಕರಪತ್ರಗಳನ್ನು ಹಾಕಿದಾಗ ಯಾರಾದರೂ ಜಾಗೃತರಾಗುವ ಸಾಧ್ಯತೆಯಿದೆ. ಇಡೀ ವಿಶ್ವದಲ್ಲಿ ವಿಶೇಷವಾಗಿ ಭಾರತದಲ್ಲಿ ಸುಖ ಶಾಂತಿ ಸ್ಥಾಪನೆ ಆಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತ್-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗು ಬೆಳಗಿನ ವಂದನೆಗಳು. ಆತ್ಮೀಯ ತಂದೆ ಆತ್ಮೀಯ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸಹೋದರ-ಸಹೋದರಿ ಅಥವಾ ಸಹೋದರ-ಸಹೋದರ ದೃಷ್ಠಿ ಪಕ್ಕಾ ಮಾಡಿಕೊಳ್ಳಿ. ಬಹಳ ಎಚ್ಚರಿಕೆಯಿಂದ ಇರಬೇಕು. ಇಂತಹ ಯಾವುದೇ ಕರ್ಮ ಆಗಬಾರದು ತಂದೆ ಹೆಸರಿಗೆ ಕಳಂಕ ಬರುವಂತದು.

2. ತಂದೆಯ ಬಗ್ಗೆ ಎಂದೂ ಸಂಶಯ ಬರಬಾರದು. ಪ್ರೀತಿಯಿಂದ ತಂದೆಯನ್ನು ನೆನಪು ಮಾಡಿ. ಹಗಲು ರಾತ್ರಿ ವಿದ್ಯೆ ಕಡೆ ಗಮನ ಕೊಟ್ಟು ಸಂಪಾದನೆ ಜಮಾ ಮಾಡಿಕೊಳ್ಳಬೇಕು.

ವರದಾನ: ಸದಾ ವಿಜಯದ ಸ್ಮೃತಿಯಿಂದ ಹರ್ಷಿತರಾಗಿರುವ ಹಾಗೂ ಸರ್ವರನ್ನು ಖುಷಿ ಪಡಿಸುವ ಆಕರ್ಷಣಾಮೂರ್ತಿ ಭವ. ನಾವು ಕಲ್ಪ-ಕಲ್ಪದ ವಿಜಯಿ ಆತ್ಮರಾಗಿದ್ದೇವೆ, ವಿಜಯದ ತಿಲಕವು ಸದಾ ಮಸ್ತಕದಲ್ಲಿ ಹೊಳೆಯುತ್ತಾ ಇರುತ್ತದೆಯೆಂದರೆ, ಈ ವಿಜಯದ ತಿಲಕವು ಅನ್ಯರಲ್ಲಿಯೂ ಖುಷಿ ತರಿಸುತ್ತದೆ. ಏಕೆಂದರೆ ಸದಾ ವಿಜಯಿ ಆತ್ಮನ ಚಹರೆಯು ಹರ್ಷಿತವಾಗಿರುತ್ತದೆ. ಹರ್ಷಿತ ಚಹರೆಯನ್ನು ನೋಡಿ ಖುಷಿಯಲ್ಲಿ ಸ್ವತಹವಾಗಿಯೇ ಎಲ್ಲರೂ ಆಕರ್ಷಿತರಾಗುತ್ತಾರೆ. ಯಾವಾಗ ಅಂತ್ಯದಲ್ಲಿ ಯಾರಿಗೂ ಕೇಳಿಸಿಕೊಳ್ಳುವ ಸಮಯವಿಲ್ಲದಿದ್ದಾಗ, ತಮ್ಮ

ಆಕರ್ಷಣೆಯಿಂದ ಕೂಡಿರುವ ಚಹರೆಯೇ ಅನೇಕ ಆತ್ಮರ ಸೇವೆ ಮಾಡುವುದು.

ಸ್ಲೋಗನ್: ನಾಲ್ಕೂ ಕಡೆಯಲ್ಲಿ ಅವ್ಯಕ್ತ ಸ್ಥಿತಿಯ ಪ್ರಕಾಶತೆಯನ್ನು ಹರಡಿಸುವುದೇ ಪ್ರಕಾಶ ಗೃಹ ಆಗುವುದಾಗಿದೆ.